೨) ಅಳಕೆ ಗ್ರಾಮದ ಲೋಕಯ್ಯ ಪೂಜಾರಿಯವರ ನಿಗೂಢ ಸಾವಿನ ತನಿಖಾ ವರದಿಗೆ ಒತ್ತಾಯ

ಶ್ರೀ ಎಂ.ವೀರಯ್ಯಸ್ವಾಮಿ (ಚಿಂಚೋಳಿ).–ದಕ್ಷಿಣ ಕನ್ನಡ ಜಿಲ್ಲೆಯ ಅಳಕೆ ಗ್ರಾಮದಲ್ಲಿ ೧೯೮೭ರ ಫೆಬ್ರುವರಿಯಲ್ಲಿ ಜರುಗಿದ ಲೋಕಯ್ಯ ಪೂಜಾರಿ ಸಾವಿನ ಪ್ರಕರಣವು ಸಾರ್ವಜನಿಕರ ಗಮನ ಸೆಳೆದಿದ್ದು ಇದರ ತನಿಖೆಯನ್ನು ಮಾರ್ಚ್ ೧೯೮೭ರಲ್ಲಿ ಸಿ.ಓ.ಡಿ. ಗೆ ಒಪ್ಪಿಸಲಾಗಿತ್ತು. ಆದರೆ ಈವರೆಗೆ ಈ ತನಿಖೆಯ ಫಲಿತಾಂಶ ತಿಳಿದುಬಂದಿರುವುದಿಲ್ಲ. ಕಾರಣ ತನಿಖೆಯ ವರದಿಯನ್ನು ಈ ಮನೆಗೆ ಕೂಡಲೇ ಕೊಡಬೇಕಾಗಿ ವಿನಂತಿಸುತ್ತೇನೆ.

ಶ್ರೀ ಎ. ಲಕ್ಷ್ಮಣಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಲಿಖಿತ ಹೇಳಿಕೆಯನ್ನು ಮಾಡುತ್ತೇನೆ.

ಶ್ರೀ ಚೆನ್ನಪ್ಪ ಪೂಜಾರಿ ರವರ ಮಗ ಸುಮಾರು ೧೮ ವಯಸ್ಸಿನ ಶ್ರೀ ಟಿ. ಲೋಕಯ್ಯ ಪೂಜಾರಿಯು ಬಂಟ್ವಾಳ ತಾಲ್ಲೂಕು ಅಲಿಕೆಯಲ್ಲಿರುವ ಲೋಕಸೇವಾ ಜೂನಿಯರ್ ಕಾಲೇಜಿನಲ್ಲಿ ಎರಡನೇ ಪಿ.ಯು.ಸಿ. ಯಲ್ಲಿ ಓದುತ್ತಿದ್ದನು. ಬಡ ವಿದ್ಯಾರ್ಥಿಯಾಗಿದ್ದು ಸತ್ಯಸಾಯಿ ಲೋಕಸೇವಾ ಟ್ರಸ್ಟ್‌ನವರು ನಡೆಸುತ್ತಿರುವ ಕಾಲೇಜಿನ ಹಾಸ್ಟೆಲ್‌ನಲ್ಲಿ ವಾಸ ಮಾಡಲು ಶಕ್ತಿ ಇಲ್ಲದಿದ್ದರಿಂದ ಪ್ರತ್ಯೇಕವಾಗಿರುವ ಒಂದು ಕಂಟೀರದಲ್ಲಿ ಸ್ವಂತ ಅಡಿಗೆ ಮಾಡಿಕೊಂಡಿದ್ದನು.

ದಿನಾಂಕ ೨೦-೨-೧೯೮೭ ರಂದು ಬೆಳಿಗ್ಗೆ ಸುಮಾರು ೧೦ ಗಂಟೆಗೆ ಕಮಿಲ್ ಡಿಸೌಜ ಎಂಬ ಸತ್ಯಸಾಯಿ ಲೋಕಸೇವಾ ಸಂಸ್ಥೆಯ ಕೂಲಿಗಾರ ಶಾಸ್ತ್ರಿ ಗುಡ್ಡೆಯ ಕಂದಕದಲ್ಲಿ ಒಂದು ಗಂಡಸಿನ ಹೆಣ ಸುಟ್ಟು ಬಿದ್ದಿರುವುದನ್ನು ಕಂಡು ವಿಠಲ್ ಪೊಲೀಸ್ ಠಾಣೆಗೆ ತಿಳಿಸಿದನು. ಈ ವರ್ತಮಾನದ ಮೇಲೆ ಅಸ್ವಾಭಾವಿಕ ಮರಣದ ಪ್ರಕರಣವನ್ನು ದಾಖಲು ಮಾಡಿಕೊಂಡು ಸ್ಥಳೀಯ ಪೊಲೀಸರು ತಪಾಸಣೆಯನ್ನು ನಡೆಸಿದರು.

ಹೆಣ ಸುಟ್ಟಿದ್ದುದರಿಂದ ಅಲ್ಲಿ ಇದ್ದ ವಸ್ತುಗಳು, ವಸ್ತ್ರ ಮತ್ತು ಮೃತನ ಮೇಲಿದ್ದ ಶಿರಡಿ ಮತ್ತು ಸತ್ಯಸಾಯಿಬಾಬಾರವರ ಲಾಕೆಟ್ ಇತ್ಯಾದಿ ಕೆಂರುಹುಗಳಿಂದ ಸದರೀ ಹೆಣವು ಲೋಕಯ್ಯ ಪೂಜಾರಿಯದ್ದೆಂದು ಆತನ ತಂದೆ, ಚಿಕ್ಕಪ್ಪ ಮಂತ್ರಿತರ ಪರಿಚಯಸ್ಥರಿಂದ ಗುರುತು ಹಿಡಿಯಲ್ಪಟ್ಟಿತು.

ಮರಣೋತ್ತರ ವೈದ್ಯಕೀಯ ಪರೀಕ್ಷೆಯಲ್ಲಿ ಮಾರಕ ಗಾಯಗಳಾವುವೂ ಕಂಡುಬರಲಿಲ್ಲ. ಶೇಕಡ ೮೦ ರಷ್ಟು ದೇಹ ಸುಟ್ಟಿತ್ತು; ವಿಧಿ ವಿಜ್ಞಾನ ಪ್ರಯೋಗ ಶಾಲೆಯವರು ನಡೆಸಿದ ಪರೀಕ್ಷೆಯಿಂದ ಯಾವ ಪಾಷಾಣವೂ ಕಂಡು ಬರಲಿಲ್ಲ. ಲೋಕಯ್ಯ ಪೂಜಾರಿ ಸುಟ್ಟಗಾಯಗಳಿಂದಾದ ಆಘಾತದಿಂದ ಸತ್ತಿರುವನೆಂದು ವೈದ್ಯರು ಅಭಿಪ್ರಾಯಪಟ್ಟರೂ ಮತ್ತು ಅದೊಂದು ಕೊಲೆ ಪ್ರಕರಣ ಎನ್ನಲು ಯಾವ ಅಂತವೂ ಕಂಡು ಬರಲಿಲ್ಲ.

ಲೋಕಯ್ಯ ಪೂಜಾರಿಯವರ ಮರಣ ಕೊಲೆಯಿಂದ ಆಗಿದೆ, ಅದನ್ನು ಮುಚ್ಚಿಹಾಕಲು ಪ್ರಯತ್ನ ನಡೆಯುತ್ತಿದೆ ಎಂದು ಲೋಕಸೇವಾ ಸಂಸ್ಥೆಯ ಕೆಲವು ಅಧಿಕಾರಿಗಳು ಮತ್ತು ಇನ್ನಿತರರ ಮೇಲೆ ಆಪಾದನೆಗಳು ಕೇಳಿಬಂದಿದ್ದರಿಂದ ಈ ಪ್ರಕರಣವನ್ನು ದಿನಾಂಕ ೧೭-೩-೧೯೮೭ ರಂದು ಸಿ.ಓ.ಡಿ.ಗೆ ವಹಿಸಲಾಯಿತು. ಸಿ.ಓ.ಡಿ. ನವರು ಮಾಡಿದ ತನಿಖೆಯ ಪ್ರಕಾರ ಲೋಕಯ್ಯ ಪೂಜಾರಿ ಬಡ ಕುಟುಂಬಕ್ಕೆ ಸೇರಿದ ವಿದ್ಯಾರ್ಥಿಯಾಗಿದ್ದು, ಎಸ್.ಎಸ್.ಎಲ್.ಸಿ ವರೆಗೆ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿ ಪಿ.ಯು.ಸಿ ಯಲ್ಲಿ ಇಂಗ್ಲೀಷ್ ಮಾಧ್ಯಮವನ್ನು ತೆಗೆದುಕೊಂಡು ಹೆಚ್ಚು ಪ್ರಗತಿಯನ್ನು ಸಾಧಿಸಲು ಅಶಕ್ತನಾದುದರಿಂದಲೂ, ಸ್ಕೌಟ್ ಚಟುವಟಿಕೆಯಲ್ಲಿ ತೊಡಗಿದ್ದರಿಂದ ದುರಾದೃಷ್ಟವಶಾತ್ ಈತನು ವಯೋಮಿತಿಯನ್ನು ಮೀರಿದ್ದರಿಂದ ''ರಾಷ್ಟ್ರಪತಿಗಳ ಸ್ಕೌಟ್'' ಎಂದು ಪರಿಗಣಿಸಲ್ಪಡಲು ಅನರ್ಹರಾಗಿದ್ದನೆಂದೂ ಮತ್ತು ಸೈಕಲ್ ಸವಾರಿ ಅಪಘಾತದಲ್ಲಿ ಕಾಲು ಮುರಿದು ಕೊಂಡು ಕುಂಟುತ್ತಿದ್ದುದರಿಂದಲೂ ಜೀವನದಲ್ಲಿ ಜಿಗುಪ್ಸೆಗೆ ಒಳಗಾದ ವಿದ್ಯಾರ್ಥಿಯಾಗಿದ್ದ. ಈ ಕಾರಣಗಳಿಂದ ೧೯-೨-೧೯೮೭ ರಂದು ತನ್ನ ಕುಟೀರದ ಸಹಪಾಠಿಗಳು ಮಲಗಿದ್ದಾಗಲೇ ಒಂದು ಪ್ಲಾಸ್ಟಿಕ್ ಸೀಮೆಯೆಣ್ಣೆ ಡಬ್ಬ ಮತ್ತು ಬಕೆಟ್‌ನ್ನು ತೆಗೆದುಕೊಂಡು ಹೋಗಿ ಸೀಮೆಯೆಣ್ಣೆ ಸುರಿದು ಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದೂ ಸಾಂದರ್ಭಿಕ ಸಾಕ್ಷ್ಯಗಳಿಂದ ಮತ್ತು ಇನ್ನಿತರ

ಆಧಾರಗಳಿಂದ ತಿಳಿದುಬಂದಿದೆ. ಲೋಕಯ್ಯ ಪೂಜಾರಿ ಮರಣ ಕೊಲೆಯಿಂದ ಆಗಿದೆ ಎಂಬ ಆಪಾದನೆಯನ್ನು ಮತ್ತು ಈ ರೀತಿ ಆಪಾದನೆ ಸಂಶಯಕ್ಕೆ ಒಳಗಾದ ವ್ಯಕ್ತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದರೂ ಸಹ ಈ ಆಪಾದನೆಗಳು ಸತ್ಯಕ್ಕೆ ದೂರವಾದುದೆಂದು ಸಿ.ಓ.ಡಿ.ನವರು ನಡೆಸಿದ ತಪಾಸಣೆಯಲ್ಲಿ ತಿಳಿದು ಬಂದಿದೆ.

ಅಧ್ಯಕ್ಷರು.— ಶ್ರೀ ಪಿ.ಬಿ. ಓಂಕಾರಮೂರ್ತಿ, ಸದಸ್ಯರು ಗೈರು ಹಾಜರಾಗಿದ್ದಾರೆ.

ಯರಮರಸ್ ಸಹಕಾರಿ ನೂಲಿನ ಗಿರಣಿ ಮುಚ್ಚಿರುವುದರಿಂದ ಕಾರ್ಮಿಕರ ಜೀವನಕ್ಕೆ ತೊಂದರೆಯಾಗಿರುವುದು:

ಶ್ರೀ ಆರ್. ವೆಂಕಟರಾವಯ್ಯ.—ರಾಯಚೂರು ಜಿಲ್ಲೆಯ ಯರಮರಸ್ ಸಹಕಾರಿ ನೂಲಿನ ಗಿರಣಿ ಮುಚ್ಚಲ್ಪಟ್ಟು ಹಲವಾರು ತಿಂಗಳು ಕಳೆದು ಹೋದವು. ಸಚಿವ ಸಮಿತಿ ಗಿರಣಿಗೆ ಭೇಟಿ ಕೊಟ್ಟಿದೆ. ನೂರಾರು ಕಾರ್ಮಿಕರು ಕೆಲಸ ಕಳೆದುಕೊಂಡು ಬೀದಿ ಪಾಲಾಗಿದ್ದಾರೆ. ಸಚಿವ ಸಮಿತಿ ಗಿರಣಿಯನ್ನು ತೆಗೆಸುವ ಆಶ್ವಾಸನೆಯನ್ನು ಕಾರ್ಮಿಕರಿಗೆ ಕೊಟ್ಟು ಬಂದಿದ್ದಾರೆ, ಇದುವರೆಗೆ ಯಾವುದೇ ರೀತಿಯ ಇತ್ಯರ್ಥವಾಗಿಲ್ಲ. ಕಾರ್ಮಿಕರ ಜೀವನ ಸಂಕಟಮಯವಾಗಿದೆ, ಕಾರಣ ಈ ಬಡ ಕಾರ್ಮಿಕರಿಗೆ ಕೆಲಸ ಒದಗಿಸುವುದು ಬಹಳ ಅವಶ್ಯವಾಗಿದೆ. ಆದ್ದರಿಂದ ಮಾನ್ಯ ಕಾರ್ಮಿಕ ಮಂತ್ರಿಗಳು ಈ ಸಮಸ್ಯೆಯನ್ನು ಗಮನಕ್ಕೆ ತೆಗೆದುಕೊಂಡು ಮುಚ್ಚಿರುವ ಗಿರಣಿಯನ್ನು ತೆಗೆಯುವಂತೆ ಮತ್ತು ಕಾರ್ಮಿಕರಿಗೆ ಬರಬೇಕಾದ ವೇತನವನ್ನು ಕೊಡಿಸುವಂತೆ ಈ ಬಗ್ಗೆ ಎಲ್ಲಾ ವಿಷಯಗಳನ್ನು ಸದನಕ್ಕೆ ತಿಳಿಸುವಂತೆ ಮಾನ್ಯ ಕಾರ್ಮಿಕ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್.ಬಿ. ಪೋತದಾರ್.—ಮಾನ್ಯ ಅಧ್ಯಕ್ಷರೆ, ರಾಯಚೂರು ಸ್ಪಿನ್ನಿಂಗ್ ಮಿಲ್ ಲಾಸ್ ಆಗಲಿಕ್ಕೆ ಕಾರಣವೇನೆಂದರೆ ಕಾಟನ್ ಪ್ರೈಸ್ ಏನಿದೆ, ನೂಲಿನ ಪ್ರೈಸ್ ಏನಿದೆ ಅದೊಂದು ಕಾರಣ. ಪವರ್ ಕಟ್‌ನಿಂದ ಪ್ರೊಡಕ್ಷನ್ ಮೇಲೆ ಪರಿಣಾಮ ಬೀರಿದೆ. ಹೆಲ್ಪಿಂಗ್ ಬಗ್ಗೆ ವಿಚಾರ ಮಾಡುವುದಾದರೆ ರಿಲೀಫ್ ಅಂಡರ್ ಟೇಕಿಂಗ್ ಎಂದು ಇದನ್ನು ಡಿಕ್ಲೇರ್ ಮಾಡುತ್ತೇವೆ. ಕಮರ್ಷಿಯಲ್ ಟ್ಯಾಕ್ಸ್ ಅರಿಯರ್ಸ್ ಅನ್ನು ಪೋಸ್ಟ್‌ಪೋನ್ ಮಾಡುತ್ತೇವೆ.

ಈ ಸ್ಪಿನ್ನಿಂಗ್ ಮಿಲ್ಲಿಗೆ ೩,೨೬,೮೦,೦೦೦ ರೂಪಾಯಿಂಗಳನ್ನು ಕೊಟ್ಟಿವು. ಈಗ ಕ್ಯಾಬಿನೆಟ್ ಸಬ್ ಕಮಿಟಿ ಮುಂದೆ ಈ ವಿಚಾರ ಇದೆ. ಸಬ್ ಕಮಿಟಿಯವರು ಮಾರ್ಚ್ ೧೧ ರಂದು ಹೋಗಿ ಬಂದಿದ್ದಾರೆ. ಕಾರ್ಮಿಕರ ಕಷ್ಟ ನಮಗೂ ಗೊತ್ತು. ಆದುದರಿಂದ ಅವರಿಂದ ರಿಪೋರ್ಟ್ ತರಿಸಿಕೊಂಡು, ಕೂಡಲೇ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.— ಶ್ರೀಮತಿ ವಸಂತ ವಿ. ಸಾಲಿಯಾನ, ಸದಸ್ಯರು ಹಾಜರಿರಲಿಲ್ಲ.

ಶ್ರೀ ಗೋಪಾಲ ಮುಕಂದ ಕಾನಡೆ, ಸದಸ್ಯರು ಹಾಜರಿರಲಿಲ್ಲ.

4. ಸಂಕೇಶ್ವರ ಮತ ಕ್ಷೇತ್ರದ ಬೈರಾಪುರ ಕೆಲಸವನ್ನು ಪೂರ್ಣಗೊಳಿಸಿ ಉಳಿದ ಜಾಗದಲ್ಲಿ ಚಿಕ್ಕ ಬೃಂದಾವನ ಮಾಡಲು ಸಲಹೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಮಾನ್ಯ ಅಧ್ಯಕ್ಷರೇ, ಹಂಕ್ಯೇರಿ ತಾಲ್ಲೂಕಿನ ಸಂಕೇಶ್ವರ ಮತಕ್ಷೇತ್ರದ ಬೈರಾಪುರ ಕೆರೆಯ ಕೆಲಸವು ಜಾಗತಿಕ ಬ್ಯಾಂಕಿನ ನೆರವಿನಿಂದ ಪೂರ್ಣಗೊಳ್ಳುವ ಹಂತದಲ್ಲಿದೆ. ಆದಷ್ಟು ಶೀಘ್ರವಾಗಿ ಈ ಕೆಲಸವು ಪೂರ್ತಿ ಮಾಡುವುದರಲ್ಲಿ ಕ್ರಮವನ್ನು ಕೈಗೊಳ್ಳಬೇಕು. ಈ ಕೆರೆಯ ನಿರ್ಮಾಣದ ನಂತರ ಕೆರೆಯ ಕಟ್ಟಡದ ಪೂರ್ವ ಭಾಗದಲ್ಲಿ ಸುಮಾರು ೭ ಎಕರೆ ಜಮೀನು ಖಾಲಿ ಉಳಿಯುತ್ತದೆಂದು ಕಂಡುಬರುತ್ತದೆ. ಖಾಲಿ ಉಳಿಯುವ ಸದರಿ ೭ ಎಕರೆ ಜಮೀನನ್ನು ತೋಟಗಾರಿಕಾ ಇಲಾಖೆಗೆ ವಹಿಸಿಕೊಟ್ಟು, ತೋಟಗಾರಿಕೆ ಅಭಿವೃದ್ಧಿ ಮಾಡುವುದಕ್ಕಾಗಿ ಸಸಿ ನರ್ಮಾಣ ಹಾಗೂ ಸಂಶೋಧನೆ ಕೇಂದ್ರವನ್ನು ಮಾಡುವುದು ಉಚಿತವೆಂದು ನಾನು ಭಾವಿಸಿರುತ್ತೇನೆ. ಹಾಗೂ ಲೋಕೋಪಯೋಗಿ ಇಲಾಖೆಗೆ ಈ ಜಮೀನನ್ನು ತೋಟಗಾರಿಕೆ ಇಲಾಖೆಗೆ ವರ್ಗಮಾಡಿ